Case called out.

**–: <u>ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ</u> :–**

ವಾದಿಯು, ಪ್ರತಿವಾದಿಯರ ವಿರುದ್ಧ ಆಜ್ಞಾಪಕ ಪ್ರತಿಬಂಧಕಾಜ್ಞೆ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ ಪ್ರತಿವಾದಿ ಯಾ ಅವರ ಕಡೆಯವರು ದಾವಾ ಆಸ್ತಿಗಳನ್ನು ಯಾವುದೇ ರೀತಿಯಿಂದ ಪರಾಧೀನ ಮಾಡದಂತೆ, ಭೋಜಾ ದಾಖಲಿಸದಂತೆ, ಕರಾರಿಗೆ ಒಳಪಡದಂತೆ ತನ್ನ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ವಾದವನ್ನು ಆಲಿಸಲಾಯಿತು ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ಹಾಜರುಪಡಿಸಿರುವ ದಾವಾ ಸ್ಥಳದ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ, ಸದರಿ ದಾಖಲೆಗಳ ಕಬ್ಜಾ ಕಾಲಂನಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುವುದು ಕಂಡು ಬರುತ್ತದೆ. ಅದರಂತೇ, ಸದರಿ ಪಹಣಿ ಪತ್ರಿಕೆಗಳ ಕಬ್ಜಾ ಕಾಲಂನಲ್ಲಿ ವಾದಿಯ ಹೆಸರು ನಮೂದಾಗಿದ್ದು ಇರುವುದಿಲ್ಲ. ಆದ್ದರಿಂದ, ಈ ಹಂತದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದೇಶ ಮಾಡುವುದಕ್ಕಿಂತ ಮೊದಲು ಉಭಯ ಪಕ್ಷಗಾರರನ್ನು ಆಲಿಸುವುದು ಅವಶ್ಯಕತೆ ಇದೆ ಎಂಬ ಅಭಿಪ್ರಾಯಕ್ಕೆ ಮಾನ್ಯ ನ್ಯಾಯಾಲಯವು ಬರುತ್ತದೆ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**OS No.160/2024.**

**<u>ಆ ದೇ ಶ</u>**

ಪ್ರತಿವಾದಿಯರಿಗೆ ತುರ್ತು ನೋಟಿಸ್ ಹಾಗೂ ದಾವಾ ಸಮನ್ಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

ಮುಂದಿನ ವಿಚಾರಣೆ ದಿನಾಂಕ 18.12.2024.

SD/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**